**<u>3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ</u>**

<u>ಎಸ್.ಸಿ.ನಂಃ</u> 263/ 2023

**ಚಾಸಾ-10, ಪ್ರಾಸಾ-10**

| | | |
|---|---|---|
| ಸಾಕ್ಷಿದಾರರ ಹೆಸರು | : | ಹರೀಶ್ |
| ತಂದೆಯ ಹೆಸರು | : | ನಂಜೇಗೌಡ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಕಾರು ಚಾಲಕ |
| ವಾಸಸ್ಥಳ | : | ಚನ್ನಪಟ್ಟಣ, ಹಾಸನ |

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 23.04.2025.</u>**

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ಚಾಸಾ-1 ಹಾಗೂ 8 ರವರ ಪರಿಚಯ ನನಗೆ ಇರುವುದಿಲ್ಲ. ಈಗ ನೋಡುತ್ತಿರುವ ನಿಪಿ-2 ರ ದಾಖಲೆಯಲ್ಲಿ ನನ್ನ ಸಹಿ ಕಂಡು ಬರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-2ಸಿ ಎಂದು ಗುರುತಿಸಲಾಯಿತು. ನಾನು ಸುಮಾರು 10 ತಿಂಗಳ ಹಿಂದೆ ಹಾಸನ ಮಹಿಳಾ ಪೊಲೀಸ್ ಠಾಣೆಯ ಮುಂದೆ ಹೋಗುತ್ತಿದ್ದಾಗ, ಪೊಲೀಸರು ಕರೆದು ನನ್ನ ಹತ್ತಿರ ಒಂದು ದಾಖಲೆಗೆ ಸಹಿ ಮಾಡಬೇಕೆಂದು ಕೋರಿಕೊಂಡ ಮೇರೆಗೆ ಪೊಲೀಸ್ ಠಾಣೆಯಲ್ಲಿ ನನ್ನ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನನ್ನು ಪಂಚಸಾಕ್ಷಿಯಾಗಿ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮವನ್ನು ಜರುಗಿಸಿಲ್ಲ. ಈಗ ತೋರಿಸುತ್ತಿರುವ ನಿಪಿ-12 ರ ದಾಖಲೆಯಲ್ಲಿ ನನ್ನ ಸಹಿ ಕಂಡು ಬರುತ್ತದೆ. ಸದರಿ ದಾಖಲೆಯು ಒಂದು ಪೊಲೀಸ್ ನೋಟೀಸ್ ಆಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-12ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿನ ನನ್ನ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಈಗ ತೋರಿಸುತ್ತಿರುವ ನಿಪಿ-6 ರ 2 ಛಾಯಾಚಿತ್ರಗಳಲ್ಲಿ ನಾನು ಇರುವುದು ಕಂಡು ಬರುತ್ತದೆ. ಸದರಿ ಛಾಯಾಚಿತ್ರವನ್ನು ಯಾವುದೋ ಒಂದು ಸ್ಥಳದಲ್ಲಿ ನನ್ನನ್ನು ಕರೆದುಕೊಂಡು ಹೋಗಿ ಪೊಲೀಸರು ತೆಗೆಸಿರುತ್ತಾರೆ. ನಿಪಿ-2 ರಲ್ಲಿನ ಬರವಣಿಗೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

**<u>ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

2. ದಿಃ 26.07.2023 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ-10 ರವರನ್ನು ಕರೆದು ನಿಪಿ-12 ರಂತೆ ನೋಟೀಸ್ ಜಾರಿ ಮಾಡಿ ನಮ್ಮನ್ನು ಚಾಸಾ-1 ರವರ ಜೊತೆ ಆಕೆ ತೋರಿಸಿದ ಸ್ಥಳವಾದ ಬೇಲೂರು ರಸ್ತೆಯ ವಿಜಯನಗರ ಬಡಾವಣೆ 2ನೇ ಹಂತದಲ್ಲಿರುವ ಲೋಕೇಶ್ ಬಿನ್ ಗಿಡ್ಡೇಗೌಡರವರಿಗೆ ಸೇರಿದ ಆರ್.ಸಿ.ಸಿ ಮನೆಯ ಮೊದಲನೇ ಅಂತಸ್ತಿನಲ್ಲಿ ಬಾಡಿಗೆಗೆ ವಾಸವಿದ್ದ 2ನೇ ಆರೋಪಿಯ ಮನೆಯಲ್ಲಿ, ಇದೇ ಜಾಗದಲ್ಲಿ 1ನೇ ಆರೋಪಿಯು ನನ್ನ ಇಚ್ಛೆಗೆ ವಿರುದ್ಧವಾಗಿ ಅತ್ಯಾಚಾರ ಮಾಡಿ, ನನಗೆ ಗೊತ್ತಿಲ್ಲದಂತೆಯೇ 2ನೇ ಆರೋಪಿಯ ಮನೆಯಲ್ಲಿ ವೀಡಿಯೋ ಚಿತ್ರೀಕರಿಸಿದ ಬೆಡ್ ರೂಮ್ ಇದೆ ಎಂದು ತೋರಿಸಿದ ಮೇರೆಗೆ ಪೊಲೀಸರು ನಿಪಿ-2 ರಂತೆ ಸ್ಥಳದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ ನಿಪಿ-6 ರಂತೆ 2 ಛಾಯಾಚಿತ್ರಗಳನ್ನು ತೆಗೆಸಿ, ಸ್ಥಳದಲ್ಲೇ ನನ್ನ ಸಹಿಯನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿನ ವಿಚಾರಗಳನ್ನು ತಿಳಿದು ನಾನು ಸಹಿ ಮಾಡಿದ್ದರೂ ಸಹ, ಆರೋಪಿತರಿಗೆ ಸಹಾಯ ಮಾಡಲೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆಪಾದಿತರ ಪರ ಶ್ರೀ ವಿ.ಎಂ ವಕೀಲರಿಂದಃ</u>**

ಆರೋಪಿಗಳ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.